International Journal of Kannada Research
www.kannadajournal.com

ISSN: 2454–5813
IJKR 2021; 7(3): 25-26
© 2021 IJKR
www.kannadajournal.com
Received: 09-05-2021
Accepted: 13-06-2021

**ಚಂದ್ರಶೇಖರ ಮಲ್ಲಪ್ಪ ಹೊಸಮನಿ**
ಸಂಶೋಧನಾ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**Corresponding Author:**
**ಚಂದ್ರಶೇಖರ ಮಲ್ಲಪ್ಪ ಹೊಸಮನಿ**
ಸಂಶೋಧನಾ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

# ಸುರುಪುರದ ಬಂಡಾಯ ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ

**ಚಂದ್ರಶೇಖರ ಮಲ್ಲಪ್ಪ ಹೊಸಮನಿ**

ಆಧುನಿಕ ಕನ್ನಡ ನಾಟಕದ ಚರಿತ್ರೆಯನ್ನು ಸುಮಾರು ಒಂದು ನೂರು ವರ್ಷಗಳ ಹಳೆಯದು. ಆದರೆ ಕಾದಂಬರಿ ಸಣ್ಣಕಥೆಗಳಿಗೆ ಲಭ್ಯವಿಲ್ಲದ ಸಂಸ್ಕೃತ ಸಾಹಿತ್ಯದ ಪರಂಪರೆಯನ್ನು ಈ ನಾಟಕ ಸಾಹಿತ್ಯಕ್ಕೆ ಲಭ್ಯವಿತ್ತು.

ನಾಟಕ ನಟನ ಪ್ರದರ್ಶನಕ್ಕಾಗಿ ರಚಿತವಾದ ಒಂದು ಸಾಹಿತ್ಯ ಪ್ರಕಾರ. ನಾಟಕ ಪ್ರೇಕ್ಷಕನ ಭೌತಿಕ ಸಾಧ್ಯತೆಗಳನ್ನು ಅನುಸರಿಸಿ ಒಂದು ನಿಗದಿತ ಸಮಯದಲ್ಲಿ ನೋಡಿ ಮುಗಿಸಿವಂತದು. ನಾಟಕ ಸನ್ನಿವೇಷಗಳು ನಟರ ನಟಜನೆಯ ಸಾಧ್ಯತೆಗಳು ಅನುಸರಿಸಿ ರಚಿತವಾಗಿರುವುದು. ಪ್ರಾಚೀನ ಗ್ರೀಕ್ ನಾಟಕಕಾರರು ಕಾಲೈಕ್ಯ, ಕ್ರೀಯೈಕ್ಯ ಮತ್ತು ಸ್ಥೈಕ್ಯ ಎಂಬ ಮೂರು ಅಂಶಗಳನ್ನು ಮುಖ್ಯವಾಗಿರಿಸಿಕೊಂಡಿದ್ದರು. ನಾಟಕ ಒಂದು ಸಂಕೀರ್ಣಕಲೆ, ಆಂಗೀಕ ಅಭಿನಯ, ಪಾತ್ರಪೋಷಣೆ, ಸಂವಿಧಾನ, ರಂಗಪರಿಕರ, ಸಂಗೀತಮೇಳ ಮುಂತಾದವುಗಳು ಸರಿಯಾಗಿ ದುಡಿಸಿಕೊಳ್ಳುವ ಅಗತ್ಯವಿರುತ್ತೆ. ಎಲ್ಲಾಕಿಂತ ಮುಖ್ಯವಾಗಿ ಪ್ರೇಕ್ಷಕ ವರ್ಗದ ಅಭಿರುಚಿಗೆ ಅನುಗುಣವಾಗಿ ನಾಟಕದ ವಸ್ತು ತಂತ್ರ ಕಾಲಕಾಲಕ್ಕೆ ಬದಲಾಗಬೇಕಾಗುತ್ತದೆ. ಸಾಮಾಜಿಕ ವಸ್ತು ವಿಷಯಗಳಾದ ಕೌಟುಂಬಿಕ ಕಲಹ, ಪ್ರೇಮ, ಐತಿಹಾಸಿಕ, ಮತ್ಸರ ಸುಖಾಂತ್ಯಗಳಿಂದ ಕೂಡಿದ ನಾಟಕ ಕಲೆ ನಂತರ ಓದುವ ವರ್ಗವನ್ನು ಗಮನದಲ್ಲಿಟ್ಟು ರಚಿಸುತ್ತಾರೆ.

ಆಧುನಿಕ ಕನ್ನಡ ನಾಟಕ ಸಾಹಿತ್ಯದ ಪ್ರಮುಖ ನಾಟಕಕಾರರ ನಾಟಕಗಳ ಸಾಲಿನಲ್ಲಿ ಡಾ. ರಂಗರಾಜ ವನದುರ್ಗರವರ 'ಸುರಪುರದ ಬಂಡಾಯ' ಎಂಬ ನಾಟಕವು ಪ್ರಮುಖವಾಗಿದೆ. ಸಗರ ನಾಡಿನ ಚರಿತ್ರೆಯೊಂದಿಗೆ ಬ್ರೀಟಿಷ ಭಾರತದ ಸ್ವಾತಂತ್ರ್ಯಕ್ಕಾಗಿ ರಾಜ ವೇಂಕಟಪ್ಪ ನಾಯಕನ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣವನ್ನು ಓದುಗರ ಮತ್ತು ನೋಡುಗರಿಗೆ ಪೂರ್ಣ ಪ್ರಮಾಣದ ಈ ನಾಡಿನ ಚರಿತ್ರೆಯನ್ನು ಒದಗಿಸುವಂತ ನಾಟಕ ಇದಾಗಿದೆ.

ಸುರಪುರದ ವೀರ ವೇಂಕಟನಾಯಕನ ಹೋರಾಟ ರೋಮಾಂಚನಕಾರಿಯಾದದು ಬ್ರೀಟಿಷರ ಕಪಿಮುಷ್ಟಿಯಿಂದ ಭಾರತದ ದೇಶವನ್ನು ಬಿಡಿಸಿಕೊಳ್ಳುವುದಕ್ಕಾಗಿ ವೇಂಕಟಪ್ಪನಾಯಕ ಹೂಡಿದ ಸ್ವಾತಂತ್ರ ಸಂಗ್ರಾಮ ಚರಿತ್ರೆಯ ಪುಟದಲ್ಲಿ ಸ್ಮರಣಿಯವಾದದ್ದು. ಬ್ರೀಟಿಷ ಕಂಪನಿ ಸರಕಾರವು ಸುರಪುರದ ಸಂಸ್ಥಾನದ ಮೇಲೆ ಕಣ್ಣು ಹಾಕಿ ಅದನ್ನು ತಮ್ಮ ವಶಕ್ಕೆ ಪಡಯಬೇಕು ಎಂಬ ಯೋಜನೆಯಲ್ಲಿರುವಾಗ ಇದನ್ನು ಅರಿತ ರಾಜ ವೇಂಕಟಪ್ಪನಾಯಕ ಎಲ್ಲಾ ರೀತಿಯಿಂದ ತಮ್ಮ ಹೋರಾಟಕ್ಕೆ ಬೇಕಾದ ಮದ್ದು ಗುಂಡು ಸೈನ್ಯವನ್ನು ಬೇರ ರಾಜ್ಯದ ರಾಜರಿಂದ ಸಹಾಯ ಪಡೆದು ಸಿದ್ದಗೋಂಡಿದ್ದ. ಬ್ರೀಟಿಷರ ವಿರುದ್ದ ಬಂಡಾಯವೆದ್ದ ಸುಳಿವನ್ನು ಸುರಪುರ ಸಂಸ್ಥಾನದ ದಿವಾನರಾದ ಭಿಮರಾಯನ ಮೊಸದಿಂದಾಗಿ ಕಂಪನಿ ಸರಕಾರಕ್ಕೆ ತಿಳಿಸಿ ಸುರಪುರ ಸಂಸ್ಥಾನದ ಮೇಲೆ ದಂಡೆತ್ತಿ ಬರುವಂತೆಮಾಡಿ ಸಂಸ್ಥಾನವೆಲ್ಲ ತನ್ನ ಆದಿನಕ್ಕೆ ಪಡೆದುಕೊಳ್ಳುವಲ್ಲಿ ಪ್ರಮುಖವಾದ ಪಾತ್ರವಹಿಸಿದ. ರಾಜ ವೇಂಕಟಪ್ಪ ನಾಯಕ ಈ ಯುದ್ದಕ್ಕೆ ಹೈದ್ರಾಬಾದಿನ ನೀಜಾಮನಿಂದ ಸಹಾಯಹಸ್ತಕೇಳಿ ಹೈದ್ರಾಬಾದಗೆ ತೆರಳಿದ ಸಂದರ್ಭದಲ್ಲಿ ರಾಜ ವೇಂಕಟಪ್ಪನಾಯಕನಿಗೆ ಮೊಸದಿಂದ ಬ್ರೀಟಷ ಅಧಿಕಾರಿಗಳು ಕೆಲವು ದಿನ ಬಂದನದಲ್ಲಿಟ್ಟು ಗುಂಡು ಆರಿಸಿ ಕೊಲೆಯನ್ನು ಮಾಡುತ್ತಾರೆ. ಈ ದುರಂತದ ಹೋರಾಟದಲ್ಲಿ ದೇಶಕ್ಕಾಗಿ ತನ್ನ ಪ್ರಾಣವನ್ನು ಅರ್ಪಿಸಿದ ರಾಜ ಪಾತ್ರ ಈ ನಾಟಕದಲ್ಲಿ ಕಣ್ಣು ಕಟ್ಟುವಂತೆ ಲೇಖಕರು ಕಟ್ಟಿಕೊಟ್ಟಿದ್ದಾರೆ.

ದಿವಾನ ಭೀಮರಾಯ ತನಗೆ ರಾಜನ ಪದವಿ ತಪ್ಪಿದಕ್ಕಾಗಿ ವೇಂಕಟಪ್ಪ ನಾಯಕನಿಂದ ಅವಮಾನಿತನಾಗಿದ್ದರ ಪರಿಣಾಮ ತಾನು ರಾಜನ ವಿರುದ್ಧ ಸೇಡು ತಿರಿಸಿಕೊಳ್ಳಬೇಕು ಎಂಬ ಹಠದಿಂದ ಬ್ರೀಟಿಷರೊಂದಿಗೆ ಜೊತೆಯಾಗಿದ್ದ. ರಾಜ ವೇಂಕಟಪ್ಪನಾಯಕ ತನ್ನ ಹೋರಾಟಕ್ಕೆ ಇತರ ರಾಜ್ಯದ ರಾಜರಿಗೆ ಸಾಹಯ ಕೇಳಿ ಬರೆದ ಪತ್ರಗಳನ್ನು ತಂದು ಬ್ರೀಟಿಷರಿಗೆ ತೋರಿಸುತ್ತಾ "ಸಾಹೆಬ್ರೇ ಈ ಪತ್ರ

ಅವಲ್ರಿ ಇವು ರಾಜನ ಪತ್ರ ಐದು ಸಾವಿರ ಅರಬಿಯನರನ್ನು ಲೋಹಿಯನರನ್ನು ಕಾಟಕ ಮಂದಿಯನ್ನ ಸುರಪುರದ ಸೈನ್ಯದೋಳಗ ಭರ್ತಿಮಾಡಕ ಭಾಡಗಿ ಕೇಳ್ಯಾನ ಇಗಾ ಸಾಹೇಬ್ರ ಇದು ತುಸುದೂಕು ಹುಸೇನ ಬರೆದದು ಆಂ ಇದನ್ನು ಮೀರ್ ಅರಪೂ ಅಲಿಗೆ ಬರೆದದು"[೧೭] ಎಂದು ಭೀಮರಾಯ ರಾಜ ವೇಂಕಟಪ್ಪನಾಯಕನ ಯುದ್ದ ತಯಾರಿಯ ಕುರಿತು ಸೂಳಿವನ್ನು ನೀಡುತ್ತಾನೆ. ಈ ವಿಷಯ ತಿಳಿದ ಬ್ರೀಟಿಷ ಸರಕಾರದ ಅಧಿಕಾರಿ ಕ್ಯಾಂಬಲೆ " ಇಷ್ಟು ಸಾಕು ಶೋರಾಪುರದ ಯಂಕಟಪ್ಪ ನಾಯಕ ಫೀನಿಶ್ ಶೋರಪುರ ಸಂಸ್ಥಾನ ಫೀನಿಶ್ ಇನ್ನೂ ಮೇಲೆ ನೀನೇ ಈ ಶೋರಾಪುರಕ್ಕೆ ಕಿಂಗ್"[೧೭] ಎಂದು ಭೀಮರಾಯನಿಗೆ ಕಿಂಗ್ ಆಗುವ ಆಸೆ ಹಚ್ಚುತ್ತಾನೆ. ಈ ದುರಾಸೆಯಿಂದ ಭೀಮರಾಯ ಸಂಸ್ಥಾನದವಿರುದ್ದ ಕುತಂತ್ರ ಹೂಡಿ ವೇಂಕಟಪ್ಪನಾಯಕ ಮತ್ತು ಬ್ರೀಟಿಷರ ನಡುವೆ ನಡೆಯುವ ಯುದ್ದಕ್ಕೆ ಕಾರಣ ಕೃರ್ತನಾಗುತ್ತಾನೆ.

ಬ್ರೀಟಿಷರೊಂದಗೆ ಯುದ್ಧ ಖಚಿತವಾದ ಪರಿಣಾಮ ತನ್ನ ಸೈನ್ಯೆವನ್ನು ಯುದ್ಧಕ್ಕೆ ಅಣಿಮಾಡಿ ರಾಜ ಹೈದ್ರಾಬಾದ ನಿಜಾಮನಿಗೆ ಭೇಟಿಯಾಗಲು ಹೈದ್ರಾಬಾದಗೆ ಪ್ರಯಾಣ ಬೆಳಸಿದ್ದನ್ನರಿತ ಬ್ರೀಟಿಷ ಅಧಿಕಾರಿಗಳು ತಮ್ಮ ಸೈನ್ಯ ಸಮೇತ ಸುರುಪುರದ ಸಂಸ್ಥಾನವನ್ನ ಹೊಕ್ಕಿ ಅಲ್ಲಿನ ಹೆಣ್ಣು ಗಂಡು ದನ ಕರ ಆಸ್ತಿ ಪಾಸ್ತಿ ಎಲ್ಲವೂ ನಾಶಪಪಡಿಸಿ ಮನಬಂದಂತೆ ಹಾಳುಮಾಡಿ ಸಂಸ್ಥಾನವೆಲ್ಲ ಲೂಟಿ ಮಾಡಿದರು. ಇಡಿ ಸುರಪುರ ಸಂಸ್ಥಾನವ್ನನು ಬ್ರೀಟಿಷ್ ಕಂಪನಿ ಸರಕಾರ ವಶಪಡಿಸಿಕೊಂಡಿತು. ಭೀಮರಾಯನ ಕುತಂತ್ರ ಬುದ್ದಿಯಿಂದ ಕನ್ನಡದ ನೆಲೆ ಬ್ರೀಟಿಷರ ಕೈವಶವಾಯಿತು. ಬ್ರೀಟಷ ಸೈನ್ಯೆದ ಅಟ್ಟಾಸ ಕಂಡ ಸಂಸ್ಥಾನದ ಪ್ರಜೆಗಳ ನೋವಿನ ಮಾತಿಲ್ಲಿ ಗಮನಿಸಬಹುದು. "ನಮ್ಮ ರಾಜನ ಅರಮನಿಮ್ಯಾಲ ಪರೆಂಗೆರ ಝುಂಡ ಏರ್ಯಾದ"[೩೨] ಎಂದು ಹೇಳುವವನ ಮಾತಿಗೆ ಪ್ರತಿಯಾಗಿ ಇನ್ನೊಬ್ಬನ ಮಾತನಲ್ಲಿನ ಹಾತಾಶಯ ಕೇಳಿಬಂದದ್ದು ಹೀಗಿದೆ." ಥೋ ಇವ್ನನೌನ್ ನಮ್ಮ ಹಣಮನ ಝುಂಡ ಹರಿದ್ರು ತಮ್ಮ ಕಂಪನಿ ಝುಂಡ ಏರಿಸಿದ್ರು"[೩೨] ಎಂದು ನುಡಿಯುವ ಈ ಮಾತಿನಲ್ಲಿ ಸ್ಥಳಿಯ ಮೂಲ ಸಂಸ್ಕೃತಿಯ ಸಂಕೇತವಾಗಿ ಹಾಳಾದ ಝುಂಡ ನಮಗೆ ಎದುರಾಗಿ ಇಲ್ಲುವುದ ಲೇಖಕರ ಸೂಕ್ಷ್ಮತೆಯನ್ನು ಜೊತೆಗೆ ನೆಲ ಮೂಲದ ಸಂಸ್ಕೃತಿಯ ಕಾಳಜಿ ಎದ್ದು ಕಾಣುವಂತದ್ದಾಗಿದೆ.

ತನ್ನ ಸಂಸ್ಥಾನ ತನ್ನ ಪ್ರಜೇಗಳು ಮತ್ತು ದೇಶವನ್ನು ಬ್ರೀಟಿಷರ ಕೈವಶದಿಂದ ಮುಕ್ತಿ ಪಡಿಸಬೇಕೆಂದು ಬ್ರೀಟಿಷರ ವಿರುದ್ದ ಯುದ್ದದಲ್ಲಿ ಹೇಗಾದರು ಮಾಡಿ ಗೆಲ್ಲಬೇಕು ಎಂಬ ಹುಚ್ಚು ಹಟದಿಂದ ೨೪ರ ಹರೆಯದ ವೇಂಕಟಪ್ಪ ನಾಯಕನನ್ನು ಹೈದ್ರಾಬಾದನಲ್ಲಿ ಕಂಪನಿ ಸರಕಾರ ಬಂದಿಸಿತು ಜೊತೆಗೆ ಅಂಗ ರಕ್ಷಕರಾದ ರಾಯಪ್ಪ ಮತ್ತು ಕೃಷ್ಣಪ್ಪನನ್ನು ಬ್ರೀಟಿಷರು ಬಂದಿಸಿದ್ದರು. ತನ್ನ ಸಂಸ್ಥಾನ ಸೊತ ಸುದ್ದಿ ಕೇಳಿದ ರಾಜ ಅರ್ಧ ಜೀವ ಹೊದವನಂತೆ ಆಗಿ ನೆಲಕುರಳಿದ್ದ. ಈ ರಾಜನ ಸ್ಥಿತಿಯನ್ನು ಕಂಡೆರೆ ನಮಗೆ ಎದುರಾಗುವ ಅವನಲ್ಲಿರುವ ದೇಶ ಪ್ರೇಮವೆ ಹೊರತು ಬೇರೆಯಲ್ಲ. ನಮ್ಮದು ಬ್ಯಾಡರ ಸಂಸ್ಥಾನದ ರಾಜ್ಯ ರಣದಾಗ ಬಡದಾಡಿ ಸಾಯ್ತಿನಿ ನನ್ನ ಪ್ರಜೆಗಳಿಗೊಸ್ಕರ್, ನನ್ನ ದೇಶಗೋಸ್ಕರ್ ನನ್ನ ನಾಡಿಗೊಸ್ಕರ್ ಈ ಪ್ರಾಣವನ್ನೆ ಕೊಡಲು ಸಿದ್ದನಿದ್ದೆನೆ ಎಂದು ಹೇಳುವ ಶೌರ್ಯದ ಮಾತು ಕೇಳಿದ ಕಂಪನಿಯವರು

"ಯಂಕಟಪ್ಪ ನಾಯಕ ನಿನ್ನ ವಯಸ್ಸಿಗೆ ತಕ್ಕಂತೆ ನಿನು ವಿಚಾರ ಮಾಡೋದು ಸಹಜ ರಾಜನಾದವನಿಗೆ ಎಪ್ಪತ್ತು ವರ್ಷದ ಸಹನೆ ಇನ್ನೂಂದು ಕಡೆ ಇಪ್ಪತ್ತು ವರ್ಷದ ಸಾಹಸ ಬೇಕು ಆದರೆ ನಿನಗೆ ಸಾಹಸ ಮಾತ್ರ ಗೋತ್ತು ಸಹನೆ ಇಲ್ಲದಕ್ಕೆ ನಿನ್ನನ್ನು ಅರೆಷ್ಟ ಮಾಡಿವಿ"[೩೮] ಎಂದು ಹೇಳು ಮಾತಿನಲ್ಲಿ ವೇಂಕಟಪ್ಪನಾಯಕನ ಸಾಹಸ ಪರಾಕ್ರಮ ಎಂತಹದು ಎಂಬುದಕ್ಕೆ ಅವರ ಈ ಮಾತು ನಮಗೆ ಸ್ಪಷ್ಟ ಉದಾಹರಣೆ.

ವೇಂಕಟಪ್ಪನಾಯಕನಿಗೆ ಕಂಪನಿ ಸರಕಾರದವರು ನ್ಯಾಯಾಂಗ ಬಂಧನದಲ್ಲಿಟ್ಟು ವಿಚಾರಣೆ ಮಾಡುವಾಗ ಆತನಿಗೆ ಗುರುವಾಗಿದ್ದ ಟೇಲರ್ ಕಂಪನಿ ಹೇಳಿದಾಮಗ ಇರು ನಿನಗ ಏನು ಮಾಡಲ್ಲ ಅಂದ ಮಾತಿಗೆ ರಾಜ ಆಗಲ್ಲ ಎಂದಾಗ "ಯಂಕಟಪ್ಪನಾಯಕ ನೀನು ಹೀಗೆ ಹಠ ಹಿಡದ್ರ ಕಂಪನಿ ಸರಕಾರ ನಿನಗೆ ಗಡಿಪಾರು ಶಿಕ್ಷೆಕೊಟ್ಟು ಕೊಲ್ಲತದ."[೪೩] ಎಂದು ಹೇಳುವನು ಅವನ ಮಾತು ಲೆಕ್ಕಿಸದೆ ಗುಲಾಮಗಿರಿಯ ಬದುಕು ಬೇಡವೆಂದು ಹೇಳುವ ರಾಜನ ಮಾತಿನಲ್ಲಿ ಸ್ವಾಭಿಮಾನವನ್ನು ಗುರುತಿಸ ಬಹುದು.

ನ್ಯಾಯಂಗ ಬಂಧನದಲ್ಲಿದ್ದ ರಾಜನಿಗೆ ಮರಣದಂಡನೆ ಶಿಕ್ಷೆ ಆದೇಶ ಹೊರಡಿಸುವರು. ಉಪಾಯದಿ ಆದರೆ ಅದನ್ನು ರದ್ದು ಪಡೆಸಿ ಕೇವಲ ನಾಲ್ಕು ವರ್ಷದ ಕಠಿಣ ಕಾರಾಗೃಹ ಶಿಕ್ಷಯನ್ನು ವಿಧಿಶಿಸಿ ಮದ್ರಾಸ ಸಮೀಪದ ಚಂಗಲ್ ಪೇಟೆ ಜೈಲಿನಲ್ಲಿ ಇಡಲು ಆದೇಶಿಸಲಾಗುವುದು ಎಂದು ವಿಲಿಯಂ ಎಂಬ ಅಧಿಕಾರಿ ಪತ್ರ ಓದಿ ಹೇಳುವುನು. ರಾಜನನ್ನು ಜೈಲಿಗೆ ಸಾಗಿಸುವಾಗ ಬ್ರೀಟಿಷ ಅಧಿಕಾರಿಗಳು ಅಂಬಾರ ಪೇಟೆ ಅರಣ್ಯದಲ್ಲಿ ನೀರು ಕುಡಿಯಲು ಬಿಟ್ಟು ಹಿಂದಿನಿಂದ ಬಂದುಕಿನಿಂದ ಗುಂಡು ಹಾರಿಸುವರು. ಅವರ ಈ ಮೊಸದ ಆಟಕ್ಕೆ ಶೌರ್ಯದಿಂದಲೆ ಅವರ ಗುಂಡಿಗೆ ಎದೆಯೋಡ್ಡಿದ ರಾಜ ವೇಂಕಟಪ್ಪನಾಯಕ " ಲೇ ಕಂಪನಿ ಸರಕಾರದ ಕುನ್ನಿಗಳ ನನಗೆ ಮೊಸಮಾಡಿ ಕೊಂದ್ರಿ ಬಯಲಿಗೆ ಬಿಟ್ಟು ನೋಡಬೇಕಿತ್ತು ಒಬ್ಬೊಬ್ಬರ ಗಂಟಲು ಹರಿದು ರಕ್ತ ಕುಡಿತಿದ್ಯಾ ರಕ್ತ ಕುಡಿತಿದ್ಯಾ..."[೫೪] ಎನ್ನುವ ಮಾತಿನಲ್ಲಿ ರಾಜನ ಧೈರ್ಯ ಸಾಹಸದ ಜೊತೆಗೆ ತನ್ನ ನಾಡಿನ ಅಭಿಮಾನ ದೇಶ ಪ್ರೇಮ ಎದ್ದುಕಾಣುತ್ತದೆ.

ಇಡಿ ನಾಟಕವನ್ನು ಲೇಖಕರು ತುಂಬಾ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಒಂದು ಸಂಸ್ಥಾನದ ಚರಿತ್ರೆಯನ್ನು ನೋಡುಗರಿಗೆ ಮನದಲ್ಲಿ ಮನೆಮಾಡುವಂತೆ ಮಾಡಿದು ಅಷ್ಟೆ ಅಲ್ಲದೆ ಅದರ ಮೂಲ ನೆಲೆಯ ಕುರಿತು ಅನಾವರಣ ಮಾಡಿದ್ದಾರೆ. ರಾಜನ ಪಾತ್ರ ನಿಜಕ್ಕೂ ಇತಿಹಾಸ ಪುಟಗಳಲ್ಲಿ ಅಳಿಯದೆ ಉಯುವಂತ ಜೀವಂತ ಪಾತ್ರವಾಗಿದೆ.

**ಅಡಿ ಟಿಪ್ಪಣಿಗಳು:**


೧) ಕನ್ನಡ ಸಾಹಿತ್ಯ ಕೋಶ. ಡಾ. ರಾಜಪ್ಪ ದಳವಾಯಿ–೨೦೦೮ ಪುಟ ಸಂಖ್ಯೆ.–೧೩೮

೨) ಹೊಸಗನ್ನಡ ಸಾಹಿತ್ಯ ಚರಿತ್ರೆ. ಎಲ್, ಎಸ್, ಶೇಷಗಿರಿರಾವ–೨೦೧೧ ಪುಟ ಸಂಖ್ಯೆ–೧೯೩

೩) ಕರ್ನಾಟಕ ರಂಗಭೂಮಿ. ಡಾ.ಎಚ್, ಕೆ, ರಂಗನಾಥ – ೨೦೧೪ ಪುಟ ಸಂಖ್ಯೆ–೨೧

೪) ಸುರಪುರದ ಬಂಡಾಯ. ಡಾ.ರಂಗರಾಜ ವನದುರ್ಗ – ೨೦೦೮ ಪುಟ ಸಂಖ್ಯೆ–೦೭

ಅದೇ ಪುಟ ಸಂಖ್ಯೆ–೧೭

ಅದೇ ಪುಟ ಸಂಖ್ಯೆ–೩೨

ಅದೇ ಪುಟ ಸಂಖ್ಯೆ–೩೮

ಅದೇ ಪುಟ ಸಂಖ್ಯೆ–೪೩

ಅದೇ ಪುಟ ಸಂಖ್ಯೆ–೫೪